ಅನುದಾನ ಬಿಡುಗಡೆ

3858(4146); ಶ್ರೀ ಮಕಬೂಲ್ ಎಸ್. ಬಾಗವಾನ್ (ಬಿಜಾಪುರ ನಗರ)

ಅ) ಹಿಂದುಳಿದ ವರ್ಗಗಳ ಧಾರ್ಮಿಕ ಹಾಗೂ ಇತರೆ ಸಂಘ ಸಂಸ್ಥೆಗಳು ಸಮುದಾಯ ಭವನ ಹಾಗೂ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ 2013–14ರಲ್ಲಿ 75 ಕೋಟಿ ಮತ್ತು 2014–15ನೇ ಸಾಲಿನಲ್ಲಿ 100 ಕೋಟಿ ರೂ ಅನುದಾನದಲ್ಲಿ ವಿಜಾಪುರ (ನ) ಕ್ಷೇತ್ರಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ,

ಆ) ವಿಜಾಪುರ (ನ) ಕ್ಷೇತ್ರಕ್ಕೆ ಬಿಡುಗಡೆಯಾಗಿರುವ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ: ಆ ಕಾಮಗಾರಿಗಳು ಯಾವ ಹಂತದಲ್ಲಿವೆ: ಇದಕ್ಕೆ ಖರ್ಚಾದ ಅನುದಾನವೆಷ್ಟು (ವಿವರ ನೀಡುವುದು)?

ಇ) ಆ ಕಾಮಗಾರಿಗಳು ಯಾವ ಹಂತದಲ್ಲಿವೆ: ಇದಕ್ಕೆ ಖರ್ಚಾದ ಅನುದಾನವೆಷ್ಟು: ಬಾಕಿ ಉಳಿದಿರುವ ಅನುದಾನ ಅನುದಾನವೆಷ್ಟು? (ವಿವರ ನೀಡುವುದು)?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಹಿಂದುಳಿದ ವರ್ಗಗಳ ಧಾರ್ಮಿಕ ಹಾಗೂ ಇತರೆ ಸಂಘ ಸಂಸ್ಥೆಗಳು ಸಮುದಾಯ ಭವನ ಹಾಗೂ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ 2013–14 ಮತ್ತು 2014–15ನೇ ಸಾಲಿಗೆ ಒದಗಿಸಿರುವ ಆಯವ್ಯಯದಲ್ಲಿ ವಿಜಾಪುರ ನಗರ ಕ್ಷೇತ್ರಕ್ಕೆ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಆ) ಅನುದಾನ ಬಿಡುಗಡೆಯಾಗದಿರುವ ಪ್ರಯುಕ್ತ ಕಾಮಗಾರಿ ಅನುಷ್ಠಾನಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.